# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **231** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **18.08.2026** |
| **ಉತ್ತರಿಸುವ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆಕಸ್ಮಿಕವಾಗಿ ಮೃತಪಡುವ ಜಾನುವಾರುಗಳಿಗೆ 'ಅನುಗ್ರಹ' (ಕುರಿ/ಮೇಕೆ) ಮತ್ತು "ಕಾಮಧೇನು" (ಹಸು/ಎಮ್ಮೆ/ಎತ್ತು) ಯೋಜನೆಗಳಡಿ ನೀಡಬೇಕಾದ ಪರಿಹಾರ ಹಣವು ಕಳೆದ ಒಂದು ವರ್ಷದಿಂದ ಬಿಡುಗಡೆಯಾಗದೇ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಆಕಸ್ಮಿಕವಾಗಿ ಮೃತಪಡುವ ಜಾನುವಾರುಗಳಿಗೆ (ಕುರಿ/ಮೇಕೆ ಮತ್ತು ಹಸು/ಎಮ್ಮೆ/ಎತ್ತು) 'ಅನುಗ್ರಹ' ಯೋಜನೆಯಡಿ ಹಂತ ಹಂತವಾಗಿ ಪರಿಹಾರ ಧನ ಬಿಡುಗಡೆಯಾಗುತ್ತಿದೆ. |
| ಆ) | ರಾಜ್ಯಾದ್ಯಂತ ಸುಮಾರು 50 ಸಾವಿರಕ್ಕೂ ಹೆಚ್ಚು ರೈತರಿಗೆ ರೂ.62 ಕೋಟಿಗೂ ಅಧಿಕ ಪರಿಹಾರ ಮೊತ್ತ ಬಾಕಿ ಇರಲು ಕಾರಣವೇನು; (ಅನುಗ್ರಹ ಯೋಜನೆ ಅಡಿ ರೂ.33.90 ಕೋಟಿ ಹಾಗೂ ಕಾಮಧೇನು ಯೋಜನೆ ಅಡಿ ರೂ.26.65 ಕೋಟಿ ಬಾಕಿ ಇರುವ ವಿವರ ನೀಡುವುದು) | ಸೆಪ್ಟೆಂಬರ್ 2023 ರಿಂದ 'ಅನುಗ್ರಹ' ಯೋಜನೆಯಡಿ ಹಸು/ಎಮ್ಮೆ/ಎತ್ತು ಹಾಗೂ ಕುರಿ/ಮೇಕೆ ಆಕಸ್ಮಿಕ ಸಾವಿಗೆ ಜುಲೈ-2026 ರವರೆಗೆ ಮರಣ ಹೊಂದಿದ 83,653 ರಾಸುಗಳ ಪೈಕಿ 51,104 ಮರಣಿಸಿದ ರಾಸುಗಳ ಮಾಲೀಕರುಗಳಿಗೆ ರೂ.59.22 ಕೋಟಿ ಪರಿಹಾರ ಧನವನ್ನು ಪಾವತಿಸಲಾಗಿದೆ ಹಾಗೂ ಜುಲೈ-2026 ರವರೆಗೆ ಮರಣ ಹೊಂದಿದ ಕುರಿ/ಮೇಕೆ ಸಂಖ್ಯೆ 2,47,344 ಗಳ ಪೈಕಿ ಮರಣಿಸಿದ 1,52,481 ಕುರಿ/ಮೇಕೆಗಳ ಮಾಲೀಕರುಗಳಿಗೆ ರೂ.84.05 ಕೋಟಿ ಪರಿಹಾರ ಧನವನ್ನು ಪಾವತಿಸಲಾಗಿದೆ.<br><br>ಪರಿಹಾರ ಧನವು ಹಂತಹಂತವಾಗಿ ಬಿಡುಗಡೆಯಾಗುತ್ತಿರುವ ಕಾರಣ ಪರಿಹಾರ ಪಾವತಿಸಲು ವಿಳಂಬವಾಗುತ್ತಿದೆ.<br><br>ಉಳಿದಂತೆ ಪಾವತಿಗೆ ಬಾಕಿಯಿರುವ 32,549 ರಾಸುಗಳ ಸಂಖ್ಯೆಗೆ ಮೊತ್ತ ರೂ.48.82 ಕೋಟಿ ಹಾಗೂ 94,836 ಕುರಿ/ಮೇಕೆಗಳ ಸಂಖ್ಯೆಗೆ ಮೊತ್ತ ರೂ.66.41 ಕೋಟಿ ಪಾವತಿಸಬೇಕಾಗಿದ್ದು, ಹೆಚ್ಚುವರಿ ಅನುದಾನಕ್ಕಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. |

...2

| | | |
|---|---|---|
| ಇ) | 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ ಮೃತಪಟ್ಟ 28 ಸಾವಿರಕ್ಕೂ ಹೆಚ್ಚು ಜಾನುವಾರುಗಳ ಪೈಕಿ, ಬಾಗಲಕೋಟೆ ಒಂದೇ ಜಿಲ್ಲೆಯಲ್ಲಿ 'ಅನುಗ್ರಹ' ಅಡಿ 1,514 ಹಾಗೂ 'ಕಾಮಧೇನು' ಅಡಿ 1,000 ರೈತರ ಪರಿಹಾರ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದರೂ ಪರಿಹಾರ ವಿತರಿಸದಿರಲು ಕಾರಣಗಳೇನು; | 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ 32,804 ರಾಸುಗಳು ಹಾಗೂ 1,21,510 ಕುರಿ/ಮೇಕೆಗಳು ಮರಣ ಹೊಂದಿರುತ್ತವೆ.<br><br>ಬಾಗಲಕೋಟೆ ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಮರಣ ಹೊಂದಿರುವ 1,122 ರಾಸುಗಳ ಪೈಕಿ 231 ರಾಸುಗಳಿಗೆ ರೂ.34.65 ಲಕ್ಷಗಳ ಪರಿಹಾರ ಧನವನ್ನು ಪಾವತಿಸಲಾಗಿದೆ.<br><br>ಬಾಗಲಕೋಟೆ ಜಿಲ್ಲೆಯಲ್ಲಿ 2025-26ನೇ ಸಾಲಿನಲ್ಲಿ ಮರಣ ಹೊಂದಿರುವ 1,320 ಕುರಿ/ಮೇಕೆಗಳ ಪೈಕಿ 237 ಕುರಿ/ಮೇಕೆಗಳಿಗೆ ರೂ.17.30 ಲಕ್ಷಗಳ ಪರಿಹಾರ ಧನವನ್ನು ಪಾವತಿಸಲಾಗಿದೆ.<br><br>2026-27ನೇ ಸಾಲಿನಲ್ಲಿ ಹಂತಹಂತವಾಗಿ ಬಿಡುಗಡೆಯಾಗುವ ಮೊತ್ತದಲ್ಲಿ ಇತರೆ ಬಾಕಿಯಿರುವ ಪರಿಹಾರವನ್ನು ಪಾವತಿಸಲಾಗುವುದು. |
| ಈ) | ಮರಣೋತ್ತರ ಪರೀಕ್ಷೆ ನಡೆಸಿದ ದಾಖಲೆಗಳನ್ನು ಸಲ್ಲಿಸಿ ತಿಂಗಳುಗಳು ಕಳೆದರೂ ಪರಿಹಾರ ಸಿಗದೆ ಸಂಕಷ್ಟದಲ್ಲಿರುವ ಜಾನುವಾರು ಮಾಲೀಕರು/ ರೈತರಿಗೆ ಈ ಬಾಕಿ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ತಕ್ಷಣದ ಕ್ರಮಗಳೇನು ಮತ್ತು ಕಾಲಮಿತಿ ಏನು? | ವಿತರಣೆಗೆ ಬಾಕಿಯಿರುವ ಪರಿಹಾರ ಧನವನ್ನು 2026-27ನೇ ಸಾಲಿನಲ್ಲಿ ನಿಗಧಿಯಾಗಿ ಬಿಡುಗಡೆಯಾಗುವ ಅನುದಾನದಲ್ಲಿ ಪಾವತಿ ಮಾಡಲಾಗುವುದು. ಇದಕ್ಕೆ ಯಾವುದೇ ಕಾಲಮಿತಿ ವಿಧಿಸಿರುವುದಿಲ್ಲ.<br><br>ಕಾಲಕಾಲಕ್ಕೆ ಅನುದಾನ ಬಿಡುಗಡೆಯಾದ ತಕ್ಷಣ ಪರಿಹಾರಧನ ಪಾವತಿಸಲು ಕ್ರಮ ವಹಿಸಲಾಗುವುದು. |

**ಪಸಂಮೀ 182 ಸಲೆವಿ 2026**

17/8

**(ಸಿ. ಪುಟ್ಟರಂಗ ಶೆಟ್ಟಿ)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**